॥ ಸತ್ಯಾನ್ನಾಸ್ತಿ ಪರೋ ಧರ್ಮಃ ॥

M 1299

ಮಂಗಳವಾರವೂ
ಸುವುದು.

ಸತ್ಯವಾದಿ

ಬಿಡಿ ಪ್ರತಿ ೩ ಪೈ.

ವಾರ್ಷಿಕ ಚಂದಾ
ಅಂಚೆ ವೆಚ್ಚ ಸೇರಿ ರೂ. ೧—೮—೦

ಆಫೀಸ್— ಚಾಮರಾಜ ಅಗ್ರಹಾರ ಮೈಸೂರು

ಮಂಗಳವಾರ 21 ನೇ ಡಿಸೆಂಬರ್ 1926 [ಸಂಚಿಕೆ 40

ನಮ್ಮಲ್ಲಿ ಎಲ್ಲಾ ತರಹದ ಊದುಬತ್ತಿಗಳೂ ಗಂಧದ ಬಿಲ್ಲೆಗಳೂ ಪನ್ನೀರು ರಾಯಲ್‌ಸುಗಂಧಿ ಎಲ್ಲಾ ತರಹದ ಪರಬತ್ತುಗಳು ಇವುಗಳೆಲ್ಲಾ ದೊರೆಯುತ್ತವೆ. ಖರೀದಿ ಕಡಮೆಯಾಗಿಯೂ ಪದಾರ್ಥಗಳು ನಂಬಿಕೆಯೂ ಗಿಯೂ ಇರುತ್ತದೆ. ಅಪೇಕ್ಷಿಸುವವರು ತರಿಸಿಕೊಳ್ಳ ಬೇಕಾಗಿ ಪ್ರಾರ್ಥನೆ

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್
ಸುಗಂಧಕಾರಿ ಮೈಸೂರು

ಅವಲ್ ರಿಖಂ, ಅತಿ ಅವಶ್ಯಕತೆ ಯುಳ್ಳವುಗಳಾಗಿಯೂ
ಅತಂಕ ನಿಗ್ರಹ ಫಾರ್ಮೆಸೀಯವುಂದ
ಬಹು ಪರಿಶ್ರಮದಿಂದ ಸಿದ್ಧಿಗೊಳಿಸಿದೂದೂ ಆದ

ಆತಂಕನಿಗ್ರಹ ಗುಳಿಗೆಗಳು

(1881 ನೆ ಇಸವಿಯಲ್ಲಿ ಸ್ಥಾಪಿತವಾದದ್ದು)

ಪಾಚೀನ ನಳಿಸಿ ಹೋಗುತ್ತಿರುವ ಮನೋಭಾವವನ್ನೂ, ಶರೀರ ಶಕ್ತಿಯನ್ನೂ ಪುನಹ ಉದ್ಧಾರ ಮಾಡಿ ಮೆದುಳಿಗೆ ಜ್ಞಾಪಕಶಕ್ತಿ ಶರೀರಕ್ಕೆ ರಕ್ತಜಲನೆ ಮತ್ತು ಅತಿ ಬಲವನ್ನುಂಟುಮಾಡುವದರಲ್ಲಿಯೂ

ಅಮೋಘ ವಾದುವುಗಳೆಂದು
ಲೋಕ ಪ್ರಸಿದ್ಧಿ ಹೊಂದಿರುವವು.

32 ಗುಳಿಗೆಗಳು ತುಂಬಿರುವ ಡಬ್ಬಿ ಒಂದಕ್ಕೆ
ಒಂದು ರೂಪಾಯಿ ಮಾತ್ರವೆ.

ವಿಶೇಷ ಮಾಹಿತಿಯನ್ನು ತಿಳಿಯಲು ಅಪೇಕ್ಷಿಸುವವರು ಅಂಚೆಹಾಸಲೂ ಇಲ್ಲದೇನೆ ಉಚಿತವಾಗಿ ಕೊಡಲ್ಪಡುವ

ನಮ್ಮ ಆರೋಗ್ಯಶಾಸ್ತ್ರವನ್ನು ಓದಿ ನೋಡಿ

ಬಹಳ ಮನೋರಂಜನೆಯೂ ಮತ್ತು
ಜ್ಞಾನಾರ್ಜನೆಯೂ ಹೊಂದುವಿರಿ

ಮಹಾತ್ಮರು :—
ಅತಂಕ ನಿಗ್ರಹ ಫಾರ್ಮೆಸಿ
26 ಬ್ರಾಡ್ವೆ, ಮದ್ರಾಸು

ಜ್ವರಗಳ ಮೇಲೆ

ಕರ್ಣಿಕ

ಎಗ್ಯೂ ಮಿಕ್ಶ್ಚರ್

ಮಲೇರಿಯಾ, ಇಕ್ವ್ಯುಯೆಂ ರ್ಸೂ, ನಡುಕ ಜ್ವರಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲಶುದ್ಧಿಯಾಗಿ ಜೀವರು ಒಂದು, ಜ್ವರವು ಬಿಡುತ್ತದೆ ಬೆಲೆ ಬಾಟ್ಲಿ ಒಂದಕ್ಕೆ 14 ಆಣೆ, ಟಪಾಲ್ ಖರ್ಚು ಬೇರೆ.

ವಿಳಾಸ—ಕರ್ಣಿಕ ಬ್ರದರ್ಸ್
56 ಗಿರಗಾಂ, ಬೊಂಬಾಯಿ

ಮೈಸೂರು ಸರ್ಕಾರದ ಸಾಲದ ಪತ್ರಗಳನ್ನು
ಮತ್ತು
ಕಂಪೆನಿಗಳ ಷೇರುಗಳನ್ನು
ಕೊಂಡುಕೊಳ್ಳುತ್ತೇವೆ ಮತ್ತು ಬಿಕರಿನೊಡುತ್ತೇವೆ

—

ಸೇವಾ ಎಲೀಷಾ ಕಂಪೆನಿ, ಮೈಸೂರು

ಅಮೃತಾಂಜನದ
1927 ನೇ ಇಸವಿಯ
ಕ್ಯಾಲೆಂಡರ್.

—

ಪ್ರಖ್ಯಾತ ಚಿತ್ರಗಾರರಿಂದ ಬರೆಯಲ್ಪಟ್ಟ ಮೂರು ಬಣ್ಣದ ಮೋಹಿನೀ ಚಿತ್ರದಿಂದೊಡಗೂಡಿದೆ 1 ಕ್ಕೆ 0-2-0 ಡಜನ್‌ಗೆ 1-4-0, 100ಕ್ಕೆ 9-12-0. ಚಿಕ್ಕ ಸೈಜು ಲಕ್ಷ್ಮಿ ಕ್ಯಾಲೆಂಡರ್ ಡಜನ್ 0-8-0, 100ಕ್ಕೆ 3-8-0

ಅಮೃತಾಂಜನ—ಇಂಡಿಯಾದೇಶದ ಬಲು ಪುರಾತನವಾದ ಅತಿ ಶ್ರೇಷ್ಠವಾದ ನೋವುತಿನ್ನುವ ಔಷಧವು

ಮ್ಯಾನೇಜರ್, ಅಮೃತಾಂಜನ ಡಿಪೋ
109 ಫೈಯರ್‌ರಸ್ತೆ, 7 ತಂಬುಚೆಟ್ಟಿಬೀದಿ
ಬೊಂಬಾಯಿ ಮತ್ತು ಮದ್ರಾಸು

Mysore Government Advertisement

MYSORE RAILWAyS

Christmas and New Year Holiday
CONCESSION
1926—1927

Advt No 6

ಮೈಸೂರು ರೈಲ್ವೆಗಳು.

1926-1927 ನೆ ಸಾಲಿನ
ಕ್ರಿಸ್‌ಮಸ್ ಮತ್ತು ಹೊಸವರ್ಷದ ಕಕ್ಷೆಸರ್ಷ

ಬರುವ ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಸಲುವಾಗಿ ಈ ರೈಲಿನಲ್ಲಿ, ಒಂದನೆ ಮತ್ತು ಎರಡನೆ ತರಗತಿಯ ಪ್ರಯಾಣೀಕರಿಗೆ ಕಕ್ಷೆಸರ್ಷ ರಿಟರ್ನ್ ಟಿಕೀಟುಗಳು, ಒಂದೂವರೆ ಛಾರ್ಜಿಗೆ ಹೋಗಾಬರ ಟಿಕೀಟು ಕೊಡಲ್ಪಡುತ್ತೆ. ಈ ಟಿಕೀಟುಗಳು ಡಿಸೆಂಬರ್ 14 ರಿಂದ 31 ರವರಗೆ ಕೊಡಲ್ಪಡುತ್ತವೆ ವಾಪಸ್ ಪ್ರಯಾಣದ ಟಿಕೀಟು 1927 ನೆ ಇಸವಿ ಜನವರಿ 14 ನೆ ತಾರೀಖಿನ ಮಧ್ಯರಾತ್ರಿ ಯವರಿಗೂ ಉಪಯೋಗಿಸ ಬಹುದು.

ಈ ಕಕ್ಷೆಸರ್ಷ ಎಂ ಎಸ್. ಎಂ ಮತ್ತು ಎಸ್. ಎ. ರೈಲ್ವೆ ಮತ್ತು ಕಕ್ಷೆಸರ್ಷ ಕೊಡಲು ಸಮ್ಮತಿಸಿರುವ ಇತರ ಹೊರಗಿನ ರೈಲುಗಳ ಮೇಲೂ ಥ್ರೂ ಬುಕಿಂಗಿಗೂ ಉಂಟು. ಇವುಗಳ ತಪಸೀಲನ್ನು ಈ ಕೆಳಗೆ ರುಜು ಮಾಡಿರುವರಿಂದಾಗಲೀ ಅಥವಾ ಈ ರೈಲ್ವೆಯ ಯಾವ ಸ್ಟೇಷನ್ ಮಾಸ್ಟರಿಂದಾಗಲೀ ತಿಳಿದುಕೊಳ್ಳ ಬಹುದು.

ಈ ಕನ್‌ಸೆಷನ್ ಈ ರೈಲಿನಲ್ಲಿ 25 ಮೈಲಿಗಳು ಮತ್ತು ಇದಕ್ಕೆ ಮೇಲ್ಪಟ್ಟೂ, ಎಂ. ಎಸ್. ಎಂ. ಮತ್ತು ಇತರ ರೈಲುಗಳಲ್ಲಿ 100 ಮೈಲಿಗಳಿಗೆ ಮೇಲ್ಪಟ್ಟೂ ಇರುವ ಫಾಸಲೆಗಳಿಗೆ ದೊರೆಯುವದು. 25 ಮೈಲಿಗಳಿಗೂ ಮತ್ತು 100 ಮೈಲಿಗಳಿಗೂ ಕಡಮೆಯಾದರೆ, 25, ಮತ್ತು 100 ಮೈಲಿಗಳಷ್ಟು ಛಾರ್ಜು ಮಾಡಲ್ಪಡುತ್ತೆ.

ಎ ಎ. ಖಾನ್
ಟ್ರಾಫಿಕ್ ಮ್ಯಾನೇಜರ್

'ಸತ್ಯವಾದಿ'

ಪ್ರಪಂಚದ ಮೂರು ದೊಡ್ಡ ರತ್ನಗಳು.

ಅತ್ಯಂತ ಹೆಚ್ಚುಬೆಲೆಯ ಮೂರು ರತ್ನಗಳು ಈ ಪ್ರಪಂಚಕ್ಕೆ ದೊರಕಿರುವವು ಇವುಗಳನ್ನು ಪರೀಕ್ಷಿಸಿ ಬೆಲೆಯನ್ನು ನಿಷ್ಕರ್ಷಿಸಲು ಅತ್ಯಂತ ಅನೋಘವಾದ ತಿಳಿವಳಿಕೆಯನ್ನುಳ್ಳ ರತ್ನಪರೀಕ್ಷಿ ವ್ಯಾಪಾರಿಗಳು ಬೇಕು. ಪ್ರಪಂಚದ ಆದಿಭಾಗದಲ್ಲಿ ಈ ರತ್ನಗಳ ಬೆಲೆಯು ಕೇವಲ ನಾಸ್ತಿ. ಕಾಲವು ನಶಿಸುತ್ತ ಒಂದಹಾಗೆಲ್ಲಾ ಇವುಗಳ ಬೆಲೆಯು ಹೆಚ್ಚುತ್ತಾ ಹೋಗುವುದು.

ಈ ಮೂರು ರತ್ನಗಳೂ ಪ್ರಪಂಚದಲ್ಲಿ ಬೇರೆಬೇರೆಯಾಗಿ ಮೂರುಸ್ಥಳಗಳಲ್ಲಿದ್ದು ತಮ್ಮ ತಮ್ಮ ದಿವ್ಯ ಕಾಂತಿಯನ್ನು ತಾವುತಾವಿರುವ ಸ್ಥಳಗಳಿಗೆ ಬೀರುವವು ಇವುಗಳ ಬೆಲೆಯನ್ನು ತಿಳಿದವರು ಈ ಮೂರೆ ರತ್ನಗಳೂ ಒಂದುಕಡೆ ಸೇರಬಾರದೇ ಎಂದು ಹಂಬಲಿಸುತ್ತಿರುವರು. ಆದರೆ ಇವುಗಳು ಒಂದೆಡೆ ಸೇರುವ ಸಂಭವವೇ ನಮಗೆ ಲಭಿಸಲಾರದೆಂದು ತೋರುವುದು.

ಯಾವುದಾದರೂ ಎರಡು ರತ್ನಗಳು ಒಂದೆಡೆ ಸೇರಿಬಿಟ್ಟರಾಯಿತು. ಮೂರನೆಯುದು ತಾನಾಗಿಯೇ ದೂರಕೆಬಿಸುವುದು ಆದರೆ ಎರಡು ರತ್ನಗಳೇ ಒಂದೆಡೆ ಸೇರುವುದು ಕೂಡ ಬಹಳ ದುರ್ಲಭವಾಗಿರುವುದು. ನೋಡಿದವರಿಗೆ ಈ ಮೂರೂ ಒಂದೆಡೆಯಲ್ಲಿರುವಂತೆಯೇ ತೋರುವುದು ಆದರೆ ಮೂರೂ ತಮ್ಮ ತಮ್ಮ ಸಂಪೂರ್ಣ ಸ್ವಾತಂತ್ರ್ಯವನ್ನನುಭವಿಸುತ್ತಾ ಸೇರಿಲ್ಲವೆಂಬುದು ತಿಳಿಯುವುದು. ಸ್ವಾತಂತ್ರ್ಯವನ್ನು ಕಳೆದುಕೊಂಡ ರತ್ನವು ಕಲ್ಲು ಹಾಳಿನ ಸಮವಾಗುವುದು.

ಸಹಸ್ರಾರು ವರ್ಷಗಳ ಪ್ರಾಪಂಚಿಕ ಅನುಭವದಿಂದ ನೋಡಿಕೊಂಡಕ್ಕೆ ಈ ಮೂರೂ ರತ್ನಗಳನ್ನು ಪರೀಕ್ಷಿಸೋಣ 1. ಅಹಿಂಸಾ:ಪರಮೋಧರ್ಮಃ ಎಂಬ ರತ್ನವು ಭಾರತೀಯರ ಕೈಗೆ ಸಿಕ್ಕಿರುವುದು ಈ ರತ್ನವು ಸರ್ವಸ್ವಾತಂತ್ರ್ಯವನ್ನು ಕೊಟ್ಟು ನಾವು ಆದರಧೀನದಲ್ಲಿರುವುದಾದರೆ ಪ್ರಪಂಚವೇ ಸ್ವರ್ಗಲೋಕವಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ. ಈ ಅಮೂಲ್ಯಾಭರಣಕ್ಕಾಗಿ ಭಾರತೀಯರು ತಮ್ಮ ಕನುಮನಸಿದ್ಧನಗಳೆಲ್ಲವನ್ನೂ ಅರ್ಪಿಸಕಕ್ಕವರಾಗಿರುವರು. ನ್ಯಾಯವಾಗಿ ತೀರ್ಮಾನಿಸಬೇಕಾದಾದರೆ ಉಳಿದ ಎರಡು ರತ್ನಕ್ಕಿಂತಲೂ ಈ ರತ್ನದ ಬೆಲೆಯೇ ಅಧಿಕವು. 2 "ಬಡವನು ಧನಿಕರು ಎಂಬ ಭೇದವಿಲ್ಲದೆ ಎಲ್ಲರನ್ನೂ ಕನ್ನಂತೆಯೇ ಕಾಣುವುದು ಏಕಮತ್ಯದ ಮೂಲಮಂತ್ರವು" ಎಂಬ ರತ್ನವು ಮಹಮ್ಮದೀಯರ ಕೈಗೆ ಸಿಕ್ಕಿರುವುದು. ಊಟ ಉಪಚಾರಗಳಲ್ಲಾಗಲೀ, ಪ್ರಾರ್ಥನಾಮಂದಿರಗಳಲ್ಲಾಗಲೀ ಮತ್ತೆಲ್ಲಿಯೇ ಆಗಲಿ ಧೊರೆಯೂ ಮತ್ತು ಆತನ ಕೈಳಗಿನ ಸಾಧಾರಣ ಒಬ್ಬ ನೌಕರನೂ ಒಂದುಗೂಡಿ ಹರುಷಿಸುವುದನ್ನು ಮಹಮ್ಮದೀಯರಲ್ಲಿ ವಿನಹ ಮತ್ತಾವ ಜಾತಿಯಲ್ಲಿಯೂ ಕೇಳಿಲ್ಲ. ಮೇಲ್ಕಂಡ ಮೊದಲನೆಯ ರತ್ನದ ಜೊತೆಗೆ ಈ ರತ್ನವು ಸೇರಿದರೆ ಆಗ ಭಗವಂತನು ಸ್ವರ್ಗಲೋಕವನ್ನೇ ಬಿಟ್ಟು ಇಲ್ಲಿಯೇ ನೆಲಸಬೇಕಾಗುವುದು. ಈ ಲೋಕವನ್ನು ಬಿಟ್ಟು ತೆರಳುವ ಆಸೆಯೇ ಆತನಿಗೆ ತಲೆಸೋಂದ. 3 "ವೈಜ್ಞಾನರಹಸ್ಯ" ವೆಂಬ ಮೂರನೆಯ ರತ್ನವು ಪಾಶ್ಚಿಮಾತ್ಯರ ಪಾಲಾಗಿರುವುದು. ಕನಸನ್ನು ಸಹಾ ನಿಜವನ್ನಾಗಿ ಮಾಡಿಕೊಂಡು ಈ ಪ್ರಪಂಚದ ನಾನಾ ಪದಾರ್ಥಗಳ ಪ್ರಕೃತಿಮಾರ್ಗವನ್ನನುಸರಿಸಿ ಅವುಗಳಿಂದ ಎಷ್ಟುಮಟ್ಟಿಗೆ ಹೆಚ್ಚು ಪ್ರಯೋಜನವನ್ನು ಪಡೆದು ಸುಖಿಸಬಹುದೆಂಬುದನ್ನು ತೋರಿಸುವದೇ ಈ ರತ್ನದ ಕಾರ್ಯವು. ಇದರಿಂದ ನಾಗರೀಕತೆಯಲ್ಲಿ ಪಾಶ್ಚಿಮಾತ್ಯರು ಎಷ್ಟು ಮುಂದರಿದಿರುವರೆಂಬುದು ಚನ್ನಾಗಿ ತಿಳಿಯುವುದು

ಈ ಮೂರು ರತ್ನಗಳಲ್ಲಿ ಮೊದಲನೆಯದು ನೆದುಳಿನ ಬಲದಿಂದ ಜೀವಿಸುವುದು ಎರಡನೆಯುದು ಎದೆಯ ಬಲದಿಂದ ನಿಂತಿರುವುದು ಮೂರನೆಯುದು ಕೈಕಾಲುಗಳ ಒಲದಮೇಲಿರುವುದು ಈ ಮೂರು ರತ್ನಗಳೂ ಸೇರಿರುವ ರಾಜ್ಯವು ಪೂರ್ಣದೇಹದಂತಿರುವುದು ಮೊಲನೆಯ ರತ್ನವಿಲ್ಲದ ರಾಜ್ಯವು ರುಂಡವಿಲ್ಲದ ದೇಹವಾಗಿಯೂ, ಎರಡನೆಯುದನ್ನುಳಿದ ರಾಜ್ಯವು ಮುಂಡವಿಲ್ಲದೆಯೂ, ಮೂರನೆಯುದನ್ನುಳಿದುದು ಕೈಕಾಲುಗಳಿಲ್ಲದ ರಾಜ್ಯವಾಗಿಯೂ ಇದ್ದು ಹುಟ್ಟಿದಂದಿನಿಂದ ಸಾಯುವವರೆಗೂ ಒಂದೇಸಮನಾಗಿ ಸಂಕಟಕ್ಕೊಳಗಿನಾಗಿರುವುದು.

ಈಗ ಸಮ್ಮ ವೈಸರಾಯರು ದೇಶದಲ್ಲಿ ಈ ಮೂರು ರತ್ನಗಳೂ ಕೂಡಿರುವವೆಂದು ಹೇಳಿದರೆ ಅತಿಶಯೋಕ್ತಿಯಲ್ಲವಲ್ಲರೆದು. ಹೇಗೆಂದರೆ —ಅಹಿಂಸಾ; ಪರಮೋಧರ್ಮಃ ಎಂಬ ರತ್ನವು ನಮ್ಮನ್ನಾಳುವ ಮಹಾರಾಜರವರ ಹಸ್ತಗತವಾಗಿ ತನ್ನ ಕಾಂತಿಯನ್ನು ಬೀರುತ್ತಿರುವುದು. "ಏಕಮತ್ಯದ ಮೂಲಮಂತ್ರ" ವೆಂಬ ಎರಡನೆಯಂತ್ರವು ನಮ್ಮ ಸಚಿವವರೇಣ್ಯರಾದ ವಿಸ್ಕೌಂ ಎಂ. ಇರ್ವಿಂಯಿ.ಲ್‌ರವರ ಹಸ್ತಗತವಾಗಿ ತನ್ನ ಕಾಂತಿಯನ್ನು ನಮಗೆ ಬೀರುತ್ತಿರುವದು. ನಮ್ಮ ದೇಶದಲ್ಲಿ ನೆಲೆಸಿರುವ ಪಾಶ್ಚಿಮಾತ್ಯರು ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ವಿದ್ಯಾಭ್ಯಾಸಮಾಡಿ ಬಂದು ನಮ್ಮ ಸೇವೆಯಲ್ಲಿರುವ ಸ್ವದೇಶೀಯರು ಇವರ ವಶವಾಗಿ "ವೈಜ್ಞಾನರಹಸ್ಯ" ಎಂಬ ಮೂರನೆಯ ರತ್ನವು ತನ್ನ ದಿವ್ಯಜ್ಯೋತಿಯನ್ನು ಬೀರುತ್ತಿರುವದು. ಕಾಲನತಿಕ್ರಮಿಸಿದಹಾಗೆಲ್ಲಾ ಈ ಮೂರು ರತ್ನಗಳ ಬೆಲೆಯು ಏರುತ್ತಾಹೋಗುವದರಿಂದ ನಮ್ಮ ದೇಶಬಾಂಧವರು ದಯವಿಟ್ಟು ಈ ಮೂರು ರತ್ನಗಳನ್ನೂ ಯಾವಾಗಲೂ ಸ್ವಾಧೀನಪಡಿಸಿಕೊಂಡಿರುವದಕ್ಕೆ ಸರ್ವದಾ ಯತ್ನಿಸುತ್ತಿರಬೇಕು ಇಲ್ಲವಾದರೆ ಕೈಬಿಟ್ಟುಹೋದ ರತ್ನಗಳು ಪುನಹ ದೊರೆಯಲಾರವು ಈ ಮೂರು ರತ್ನಗಳು ಒಟ್ಟುಸೇರಿ ಒಂದು ದೇಹವೆಂದಮೇಲೆ ಇವುಗಳನ್ನು ಕಾಪಾಡಿದರೆ ನಮ್ಮ ದೇಹವನ್ನೇ ಕಾಪಾಡಿದಂತಾಗುವದು.

ಈ ಭೂದೇವಿಯ ಎರಡು ಶೀತವಲಯಗಳಲ್ಲಿಯೂ ಮೂರನೆಯರತ್ನವು ನೆಲೆಸಿರುವದು. ಎರಡು ಸಮಶೀತೋಷ್ಣವಲಯಗಳಲ್ಲಿಯೂ ಎರಡನೆಯರತ್ನವಿರುವದು. ಉಷ್ಣವಲಯದಲ್ಲಿ ಮೊದಲನೆಯರತ್ನವಿರುವದು. ಆದ ಕಾರಣ ಭೂದೇವಿಗೆ ಉಷ್ಣವಲಯವೇ ತಲೆಯಾಗಿಯೂ ಸಮಶೀತೋಷ್ಣವಲಯಗಳೇ ಎದೆ ಹೊಟ್ಟೆಗಳಾಗಿಯೂ ಶೀತವಲಯಗಳೇ ಕೈಕಾಲುಗಳಾಗಿಯೂ ಇರುವವೆಂದರೆ ಭೂರಮಾತೆಯ ಜ್ಞಾನವೂ, ಮಹಮ್ಮದೀಯರ ಬಲವೂ, ಪಾಶ್ಚಿಮಾತ್ಯರ ಬುದ್ಧಿಯೂ ಒಟ್ಟುಗೂಡಿ ಕೆಲಸಮಾಡಿದರೆ ಸರ್ವರಿಗೂ ಸುಖ. ಇಲ್ಲದಿದ್ದರೆ ಸರ್ವನಾಶ

ಏಕಮತ್ಯ.

ಒಂದೇ ಅಭಿಪ್ರಾಯವುಳ್ಳ ಅನೇಕರು ಒಂದಾಗಿ ಸೇರುವದೇ ಏಕಮತ್ಯವೆಷ್ಟೆ. ಸಮಸ್ತ ಕಾರ್ಯಸಿದ್ಧಿಗಳಿಗೆ ಇಂತಪ್ಪ ಏಕಮತ್ಯವೇ ಪ್ರಧಾನವಾದದ್ದು. ಒಬ್ಬ ಬಲಶಾಲಿಯಾದ ಸೈಲ್ವಾಸನು ತ
ಗಿಸಿ ಎಳೆದಾಗ್ಯೂ ಇತರ
ವು ಮುಂದಕ್ಕೆ ಒರಲಾರದ
ಮುಂದಿ ಸರಿ ಸುಮಾರ
ಥಾ ರಥವನ್ನಾದರೂ ಮು
ಸೌಭಾತಕ್ಕೆ ಕಲೊಯುಗೆ
ಯೆ ದೊಡ್ಡದು. ನಾವು ಕ
ನೇಕರ ಪರಿಶ್ರಮದಿಂದಾದ್ದು
ಲ್ಲದೆ ಪಸ್ತ್ರವಾಗಲಿಲ್ಲ.
ಮನೆಯೂ ಹಾಗೆಯೆ. ಮ
ಗಳಾದ ಸವಸ್ತ ಕಾರ್ಯಗಳೂ
ನೆಂವೇರಬೇಕೆಂಬುವದು ಯಾವಾ
ಆಗಲೇ ಮನುಷ್ಯನು ಪರಸ್ಪರ ಸ
ಸಕ್ಕ ಜೀವಿಯಾಗಿ ಪರಮೇಶ್ವರನಿಂದ ಸೃಷ್ಟಿಸಲ್ಪಟ್ಟರು
ತ್ತಾನೆಂದು ಸ್ಪಷ್ಟವಾಗುತ್ತಲಿದೆ

ವ್ಯಾಘ್ರಾದಿಗಳಿಗಾದರೆ ಅವುಗಳ ಪ್ರಾಣಸಂರಕ್ಷಣೆಗಾಗಿ ಆಯುಧಗಳಹಾಗೆ ಇಂತಕ್ಕ ಕೊಂಬುಗಳೂ ಕೋರೆಹಲ್ಲುಗಳೂ ಹರಿತವಾದ ಉಗುರುಗಳೂ ಇರುತ್ತವೆ. ಒಲವಾದ ಥಳಿಗಾಳಿ ಮುಂತಾದ ಬಾಧೆಗಳು ಉಂಟಾಗದಿರುವದಕ್ಕಾಗಿ ಮೈನೇಲೆ ರೋಮಗಳೂ ಗರಿಗಳೂ ದಪ್ಪ ಚರ್ಮಗಳೂ ಇರುತ್ತವೆ. ಹೀಗಿದ್ದರೂ ಅವು ಪರಸ್ಪರಾವಲಂಬನೆಯಿಂದ ಕಾಲಕ್ಷೇಪಮಾಡುತ್ತಿರುವಾಗ್ಯೆ ಇವು ಯಾವ ಅನುಕೂಲಗಳೂ ಇಲ್ಲದಿರುವ ಮನುಷ್ಯನು ಇತರ ಸಹಾಯವಿಲ್ಲದೆ ಸುಖವಾಗಿ ಲೋಕಯಾತ್ರೆ ಮಾಡುವದಕ್ಕಾದೀತೆ?

ಕಾಕಾದಿ ತಿರ್ಯಗ್ಜಂತುಗಳು ಕೂಡ ಆಹಾರವಿಹಾರಗಳಿಗಾಗಿ ಏಕಮತ್ಯದಿಂದ ಪ್ರವರ್ತಿಸುತ್ತಲಿವೆ ಅನ್ಯೋನ್ಯಸಹಾಯವಿಲ್ಲದೆ ಸಂಘೀಭವಿಸದೆ ಹೋದಲ್ಲದೆ ಲೋಕದಲ್ಲಿ ಮನುಷ್ಯನಷ್ಟು ದುರ್ಬಲವಾದ ಪ್ರಾಣಿಯೇ ಮತೊಂದು ಇರುವದಿಲ್ಲ. ಸಂಜ ಇರುವೆಯು ಹತ್ತಿರಕ್ಕೆ ಬಂದಾಗ್ಯೂ ಎಲ್ಲಿ ಕಚ್ಚುತ್ತದೆಯೊ ಯೆಂದು ಹೆದರುವದೇ ಮನುಷ್ಯನ ಸ್ವಭಾವ ಇಷ್ಟು ದುರ್ಬಲನಾದ ಮನುಷ್ಯನ ಬಲವೆಲ್ಲವೂ ಸಂಘೀಭಾವದಲ್ಲಿರುತ್ತದೆ. ಪುರುಷನಿಗೆ ದೇಹಬಲವಹೆಗೆಯೋ ಹಾಗೆಯೇ ಸಂಘಕ್ಕೆ ಯೇಕಮತ್ಯದಿಂದಲೇ ಬಲವುಂಟಾಗತಕ್ಕದ್ದು. ಯೇಕಮತ್ಯವಿಲ್ಲದ ಸಂಘವೃದ್ಧಿಗೆ ಬರತಕ್ಕದ್ದೇ ಅಲ್ಲ.

ಯೆಷ್ಟು ಬುದ್ಧಿಶಾಲಿಯಾಗಿರಲಿ ಯೆಷ್ಟು ವಿದ್ಯಾವಂತನಾಗಿರಲಿ, ಒಬ್ಬ ಮನುಷ್ಯನು ಸಂಘಬಲವಿಲ್ಲದೆ ಯಾವ ಕಾರ್ಯವನ್ನೂ ನೆವೇರಿಸಲಾರನು. ಯೇಕಮತ್ಯದ ದೊಡ್ಡಲಾಭವೇ ಸುಖಜೀವನವು. ಇದಕ್ಕೆ ಉದಾಹರಣೆ.

ಒಂದು ಊರಿನಲ್ಲಿ ಒಬ್ಬ ಕೂದ್ರಸಿಗೆ ನಾಲ್ಕುಮಂದಿ ಗಂಡುಮಕ್ಕಳಿದ್ದರು. ಅವರು ನಿತ್ಯವೂ ಗಿಡಕ್ಕೆಹೋಗಿ ಸೌದೆಯನ್ನು ತಂದುಮಾರಿ ಜೀವಿಸತಕ್ಕವರು. ಇವರೆಲ್ಲರೂ ಸಕ್ಕದಯರಾಗಿಯೇ ಕಾಲಕ್ಷೇಪಮಾಡುತ್ತಿದ್ದರು. ಕೆಲವುದಿನಗಳಾದಮೇಲೆ ಅಜ್ಞಾನವಶಾತ್ ಇವರಲ್ಲಿ ಪರಸ್ಪರ ವಿರೋಧಹುಟ್ಟಿತು ಒಬ್ಬರಿಗೊಬ್ಬರು ಮಾತಾಡುವದನ್ನೇ ಬಿಟ್ಟರು. ಒಂದು ದಿನ ಇವರು ನಾಲ್ವರೂ ಸೌದೆಹೊರೆಯನ್ನು ಹೊತ್ತು ತಂದು ಹೊರೆ ಇಳಿಸಬೇಕೆಂದು ತಂದೆಯನ್ನು ಕೂಗಿದರು. ತಂದೆಯು ಈ ಭಾವವನ್ನು ತಿಳಿದುಕೊಂಡು ಹೊರೆಗಳನ್ನಿಳಿಸಿ, ಅಪ್ಪಾ ಮಕ್ಕಳಿರಾ ನೀವೆಲ್ಲರೂ ಒಗ್ಗಟ್ಟಾಗಿರುವವರೆಗೆ ಯಾರೂ ನಿಮ್ಮ ಗೋಜಿಗೆ ಬರುವದಿಲ್ಲ, ಈಗ ಅದಕ್ಕೆ ಅವಕಾಶವಾಯಿತು. ಬಲಹೀನರೂ ಹಾಸ್ಯಾಸ್ಪದರೂ ಆಗಿಬಿಟ್ಟಿರಿ. ಆದ್ದರಿಂದ ಯೇಕಮತ್ಯದಿಂದುಂಟಾಗತ